ಕಷ್ಟ, ಮರಗಳ ಬೇರುಗಳು ಸಡಿಲಗೊಂಡಾಗ, ವಿಪರೀತ ಗಾಳಿ ಬೀಸಿದಂತಹ ಸಂದರ್ಭದಲ್ಲಿ ಮರಗಳು ಬೀಳತಕ್ಕಂಥ ಸಂಭವವಿರುತ್ತದೆ. ಇದು ದೊಡ್ಡ ಊರು ಆಗಿರುವಂಥಾದ್ದೇ ಈ ಅನಾಹುತಕ್ಕೆ ಕಾರಣವಾಗಿದೆ. ತಾವು ಈ ಊರಿನ ಮೂಲ ನಿವಾಸಿಗಳು, ತಾವು ಇಷ್ಟು ದೊಡ್ಡದಾಗುವುದಕ್ಕೆ ಬಿಡಬಾರದಾಗಿತ್ತು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮುದಿ ಮರ, ಎಳೆ ಮರಗಳನ್ನು ಗುರುತಿಸಲು, ಮನುಷ್ಯರಷ್ಟು ಕಷ್ಟವಾಗುವುದಿಲ್ಲ. ಈ ಮನುಷ್ಯರು ತಲೆ ಕೂದಲಿಗೆ ಡೈ ಹಾಕಿಕೊಂಡರೆ ವಯಸ್ಸನ್ನು ಗುರುತಿಸುವುದಕ್ಕೆ ಆಗುವುದಿಲ್ಲ. ಆದರೆ ಮರಗಳನ್ನು ಗುರುತಿಸಬಹುದೆಂದು ಅನ್ನಿಸುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ ; ಮಾನ್ಯ ಅಧ್ಯಕ್ಷರೇ, ಹೌದು, ಈಗ ವೈಜ್ಞಾನಿಕವಾಗಿ ಮರಗಳ ತೊಗಟೆ ಮತ್ತು ಅದರ ಕಾಂಡಗಳ ಅಳತೆಯ ಮೇಲೆ, ಮರಗಳ ವಯಸ್ಸನ್ನು ಗುರುತಿಸುತ್ತಾರೆ. ಆದರೆ ಒಂದೇ ತರಹದ ಸ್ಪಿಶೀಸ್ ಮರಗಳನ್ನು ನೆಡುತ್ತಾರೆ, ತಾವು ಅರಣ್ಯ ಪ್ರದೇಶದಿಂದ ಬಂದಿರುವವರು. ತಾವು ಅಲ್ಲಿ ಮರಗಳು ಹೇಗೆಂದು ಗುರುತಿಸುತ್ತೀರಿ. ಆದರೆ ಇಲ್ಲಿರುವಂಥಾದ್ದು, ಯಾವುದಾದರೂ ಬೇಗನೆ ಬೆಳೆಯುವಂಥಾದ್ದು, ಮತ್ತು ಹೆಚ್ಚು ವ್ಯಾಪಕವಾಗಿ ಹರಡದೇ ಇರುವಂಥಾದ್ದು ಇರುತ್ತವೆ. ಇಲ್ಲಿ ಕರೆಂಟ್ ಲೈನ್‌ಗಳಿಗೆ ತೊಂದರೆಯಾಗಬಾರದು. ಮನೆಗಳನ್ನು ಪಕ್ಕದಲ್ಲೇ ಅತಿಕ್ರಮವಾಗಿ ಕಟ್ಟಿರುತ್ತಾರೆ. ಇವರಿಗೆ ವರಾಂಡಕ್ಕೆ ರೆಂಬೆಗಳು ಹೋಗಬಾರದು. ಈ ರೀತಿಯ ಮರಗಳನ್ನು ಇಲ್ಲಿ ಬೆಳೆಸುವುದರಿಂದ, ಅವುಗಳ ಬೇರುಗಳು ಸಡಿಲವಾಗಿರುತ್ತವೆ. ಅವು ಬೀಳುತ್ತವೆ. ಈ ಎಲ್ಲಾ ವಿಚಾರಗಳು ತಮಗೂ ಗೊತ್ತಿದೆ. ಆದುದರಿಂದ ಇದರ ಬಗ್ಗೆ ಆಯುಕ್ತರೊಡನೆ ಮಾತನಾಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೇ, ಈಗ 58 ಕೋಟಿ ರೂಪಾಯಿಗಳಿಗೆ ಸರ್ಕಾರ ಅನುಮತಿಯನ್ನು ಕೊಡುತ್ತದಾ, ಇಲ್ಲವಾ? ಅದನ್ನು ಯಾವಾಗ ಕೊಡುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ ಕೊಡುತ್ತದೆ.

ವಿಷಯ : ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಶ್ರೀ ಜಗದೀಶ್ ಶೆಟ್ಟರ್ ಪರವಾಗಿ ಮಾನ್ಯ ಅಧ್ಯಕ್ಷರೇ, ರಾಜ್ಯದ ದಿನಗೂಲಿಗಾರರನ್ನು ಖಾಯಂಗೊಳಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

† **ಶ್ರೀ ಎಂ.ಪಿ. ಪ್ರಕಾಶ್(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) :** ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ಸದನದ ಮುಂದೆ ನೀಡಬಯಸುತ್ತೇನೆ.

ಸರ್ವೋನ್ನತ ನ್ಯಾಯಾಲಯವು ರಿಟ್ ಅರ್ಜಿ ಸಂ. 8307–11 : 1983 ರಲ್ಲಿ ದಿನಾಂಕ; 23.2.1990ರಂದು ನೀಡಿದ ಅಂತಿಮ ತೀರ್ಪಿನ ಹಿನ್ನೆಲೆಯಲ್ಲಿ

ದಿನಾಂಕ ; 6.8.1990ರ ಸರ್ಕಾರಿ ಆದೇಶ ಸಂಖ್ಯೆ : ಡಿಪಿಎಆರ್ 2 ಎಸ್ಎಲ್ಸಿ 90ನ್ನು ಹೊರಡಿಸಿ, ಸದರಿ ಆದೇಶದ ಪ್ರಕಾರ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1.7.1984ರಂದು ಅಥವಾ ಅದಕ್ಕಿಂತ ಮುಂಚೆ ನೇಮಕಾತಿ ಹೊಂದಿರುವ ಸಾಂದರ್ಭಿಕ/ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಮೇಲ್ಕಂಡ ದಿನಾಂಕ : 23.2.1990ರ ತೀರ್ಪಿನ ಪ್ರಕಾರ ದಿನಾಂಕ : 1.7.1984ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ : 1.7.84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇಪೆಯನ್ನು ಸಕ್ರಮಗೊಳಿಸುವ ಕುರಿತು ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ. 12610/93 ಮತ್ತು 28248-449/98 ರಲ್ಲಿ ದಿನಾಂಕ : 22.9.98ರಂದು ಆದೇಶ ನೀಡಿತ್ತು. ಈ ಆದೇಶದ ವಿರುದ್ಧ ಸರ್ಕಾರವು ವಿಭಾಗೀಯ ಪೀಠದ ಮುಂದೆ ರಿಟ್ ಮೇಲ್ಮನವಿ ಸಲ್ಲಿಸಿತ್ತು. (ರಿಟ್ ಮೇಲ್ಮನವಿ ಸಂಖ್ಯೆ : 120 ಮತ್ತು 128-329 : 1999) ಸದರಿ ಪ್ರಕರಣದಲ್ಲಿ ವಿಭಾಗೀಯ ಪೀಠವು ದಿನಾಂಕ 1.2.2001ರಂದು ತೀರ್ಪನ್ನು ನೀಡಿ ಮೇಲ್ಕಂಡ ದಿನಾಂಕ : 22.9.98ರ ಆದೇಶವನ್ನು ತಳ್ಳಿ ಹಾಕಿ ಸರ್ಕಾರವು ಸಲ್ಲಿಸಿದ್ದ ರಿಟ್ ಅಪೀಲನ್ನು ಅಂಗೀಕರಿಸಿದೆ. ಹಾಗೂ ದಿನಾಂಕ : 1.7.84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ತೀರ್ಪನ್ನು ನೀಡಿದೆ. ಕರ್ನಾಟಕ ಸಾಂದರ್ಭಿಕ ಹಾಗೂ ದಿನಗೂಲಿ ನೌಕರರ ಸಂಘವು ಮೇಲ್ಕಂಡ ದಿನಾಂಕ : 1.2.2001 ರ ತೀರ್ಪಿನ ವಿರುದ್ಧ ಸರ್ವೋನ್ನತ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಸಂಖ್ಯೆ : 3112-3314/2001ನ್ನು ಸಲ್ಲಿಸಿತ್ತು (ಈಗ ಸಿವಿಲ್ ಅಪೀಲು ಸಂಖ್ಯೆ: 1861-2063:2001)

ಇದಲ್ಲದೆ, ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಮಹಾಮಂಡಲ, ಹುಬ್ಬಳ್ಳಿ, ಇದರ ಬೇಡಿಕೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ಸಚಿವ ಸಂಪುಟ ಉಪ ಸಮಿತಿಯು ನೀಡಿದ ಶಿಫಾರ್ಸಿನ ಆಧಾರದ ಮೇಲೆ ದಿನಾಂಕ : 1.7.1984ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವುದು ಸೂಕ್ತವಾಗಿರುವುದಿಲ್ಲವೆಂದು ಸರ್ಕಾರವು ತೀರ್ಮಾನಿಸಿದೆ. ಈ ತೀರ್ಮಾನವನ್ನು ಸರ್ವೋನ್ನತ ನ್ಯಾಯಾಲಯದ ಗಮನಕ್ಕೆ ತರಲಾಗಿತ್ತು. ದಿನಾಂಕ 15.10.2003ರಂದು ಸಿವಿಲ್ ಅಪೀಲು ಸಂಖ್ಯೆ : 1861-2063/2001 ಮತ್ತಿತರ ಸಂಬಂಧಿತ ಅರ್ಜಿಗಳ ಕುರಿತು ವಿಚಾರಣೆಯನ್ನು ನಡೆಸಿದ ಸರ್ವೋನ್ನತ ನ್ಯಾಯಾಲಯವು ದಿನಗೂಲಿ ನೌಕರರ ಸಕ್ರಮಾತಿ ಕುರಿತಂತೆ ಸರ್ವೋನ್ನತ ನ್ಯಾಯಾಲಯವು ಭಿನ್ನಭಿನ್ನವಾದ ತೀರ್ಪುಗಳನ್ನು ನೀಡಿರುವುದರಿಂದ ಈ ಪ್ರಕರಣವನ್ನು ಸದರಿ ನ್ಯಾಯಾಲಯವು ತ್ರಿಸದಸ್ಯ ಪೀಠವು ಪರಿಶೀಲಿಸುವುದು ಸೂಕ್ತವೆಂದು ತೀರ್ಪನ್ನು ನೀಡಿತ್ತು. ಈ ತೀರ್ಪಿನ ಹಿನ್ನೆಲೆಯಲ್ಲಿ ಪ್ರಕರಣವು

ಸರ್ವೋನ್ನತ ನ್ಯಾಯಾಲಯವು ತ್ರಿಸದಸ್ಯ ಪೀಠದ ಮುಂದೆ ದಿನಾಂಕ ; 18.11.2003ರಂದು ವಿಚಾರಣೆಗೆ ಬಂದಿತ್ತು. ಆ ದಿನ ನ್ಯಾಯಾಲಯವು ಈ ಪ್ರಕರಣವನ್ನು ಐದು ಜನ ನ್ಯಾಯಾಧೀಶರ ಪೀಠವು ಪರಿಶೀಲಿಸುವುದು ಸೂಕ್ತವೆಂದು ತೀರ್ಪಿತ್ತಿದೆ. ಹಾಗಾಗಿ ಈ ಪ್ರಕರಣವು ಈಗ ಸರ್ವೋನ್ನತ ನ್ಯಾಯಾಲಯದ 5 ಜನ ನ್ಯಾಯಾಧೀಶರ ಪೀಠದ ಮುಂದಿದೆ. ಸದ್ಯದಲ್ಲಿ ಈ ಪ್ರಕರಣವು ವಿಚಾರಣೆಗೆ ಬರುವ ಸಂಭವವಿದೆ. ನ್ಯಾಯಾಲಯದ ತೀರ್ಪಿನ ಆಧಾರದ ಮೇಲೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

† **ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :** ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಸುಮಾರು 17–18 ಸಾವಿರ ದಿನಗೂಲಿ ನೌಕರರು ಕಳೆದ 10–15 ವರ್ಷಗಳಿಂದ, ಅವರ ಬದುಕನ್ನೇ ಕಟ್ಟಿಕೊಂಡು ಜೀತದಾಳಿನಂತೆ ದುಡಿಯುತ್ತಿದ್ದಾರೆ. ಅವರು ಅತ್ಯಂತ ಕನಿಷ್ಟ ಸಂಬಳವನ್ನು ಪಡೆಯುತ್ತಿದ್ದಾರೆ. ಇವರ ಬಗ್ಗೆ ಅನೇಕ ಸಾರಿ ಈ ಸದನದಲ್ಲಿ ಪ್ರಸ್ತಾಪವಾಗಿತ್ತು. ದಿನಗೂಲಿ ನೌಕರರಾಗಿರುವ ಇವರುಗಳು ಯಾರೆಂದರೆ ಡ್ರೈವರುಗಳು, ಕಸ ಗುಡಿಸುವವರು. ವಾಚ್‌ಮನ್‌ಗಳು. ಫಾರೆಸ್ಟ್ ವಾಚರ್‌ಗಳು. ಈ ರೀತಿಯ ಸಿ ಮತ್ತು ಡಿ ದರ್ಜೆಯ ನೌಕರರಾಗಿದ್ದಾರೆಯೇ ಹೊರತು ಬಹಳ ಉನ್ನತ ಹುದ್ದೆಯಲ್ಲಿರುವಂಥ ಜನ ಇವರಲ್ಲ. ಈ ರಾಜ್ಯದಲ್ಲಿ ಅನೇಕ ಚೀಫ್ ಇಂಜಿನಿಯರುಗಳ ಹುದ್ದೆಗಳನ್ನು, ಕಾರ್ಯದರ್ಶಿಗಳ ಹುದ್ದೆಗಳನ್ನು ಸೃಷ್ಟಿ ಮಾಡಿದ್ದೀರಿ. ಅದೇ ರೀತಿ, ಅನೇಕ ಉನ್ನತ ಹುದ್ದೆಗಳನ್ನು ಸೃಷ್ಟಿ ಮಾಡಿದ್ದೀರಿ. ಇಂಥ ಒಂದು ಉನ್ನತ ಹುದ್ದೆಗೆ ಕೊಡುವ ಸೌಲಭ್ಯಗಳಲ್ಲಿ, ಇಂಥ ಸಿ ಮತ್ತು ಡಿ ದರ್ಜೆಯ 50 ಜನ ನೌಕರರಿಗೆ ಸಂಬಳ ಕೊಡಲು ಸಾಧ್ಯವಾಗುತ್ತದೆ. ಅಂಥ ಉನ್ನತ ಹುದ್ದೆಗಳನ್ನು ಸೃಷ್ಟಿ ಮಾಡುತ್ತೀರಿ. ಆದರೆ, ಕಸ ಹೊಡೆಯುವಂಥ ಒಬ್ಬ ಸಾಮಾನ್ಯ ಜವಾನನನ್ನು ನೀವು ಖಾಯಂ ಮಾಡಲು ಸರ್ವೋನ್ನತ ನ್ಯಾಯಾಲಯಕ್ಕೆ ಹೋಗಿ, ಇನ್ನೊಂದು ನ್ಯಾಯಾಲಯಕ್ಕೆ ಹೋಗಿ ಎಂದು ಹೇಳುತ್ತಿರುವಂಥಾದ್ದು ಮಾನವೀಯತೆ ಅಲ್ಲ. ಇಂಥ ನೌಕರರು ಬೇಡವೇ, ಅನಗತ್ಯವೇ ಎಂದರೆ ಖಂಡಿತವಾಗಿಯೂ ಅವರ ಅಗತ್ಯತೆ ಇದೆ. ನಮ್ಮ ಕಛೇರಿಯಲ್ಲಿ ಆ ಸ್ಥಾನ ಖಾಲಿ ಬಿದ್ದುದ್ದರಿಂದ ಇವತ್ತು ಕಛೇರಿಗಳು ಧೂಳಿನಿಂದ ಕೊಳೆಯುತ್ತಿವೆ. ಅಲ್ಲಿ ಕಸ ಗುಡಿಸುವವರು ಯಾರೂ ಇಲ್ಲ. ವಾಚ್‌ಮನ್‌ಗಳಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ಸರ್ಕಾರಿ ಕಛೇರಿಗಳು ಕೆಲಸ ಮಾಡುತ್ತಿವೆ. ಅರಣ್ಯ ಇಲಾಖೆಯಲ್ಲಿ ಸಾವಿರಾರು ಗಾರ್ಡ್‌ಗಳ ಹುದ್ದೆಗಳು ಖಾಲಿ ಇವೆ. ಹೀಗಾಗಿ, ಅರಣ್ಯ ಲೂಟಿಯಾಗುತ್ತಿವೆ. ಅದಕ್ಕಾಗಿ, ಅಲ್ಲಿರುವಂಥ ದಿನಗೂಲಿ ನೌಕರರನ್ನು ಖಾಯಂ ಮಾಡಿ ಎಂದರೆ, ನೀವು ಅವರನ್ನು ಕಿತ್ತು ಹಾಕುತ್ತೇವೆ ಎಂದು ಹೇಳುತ್ತೀರಿ. ಈ ರೀತಿಯಲ್ಲಿ, ಇದರ ಬಗ್ಗೆ ಸರ್ಕಾರ ಕುಳಿತುಕೊಂಡು ಯೋಚನೆ ಮಾಡುವಂಥ ವ್ಯವದಾನವೂ ಕೂಡ ಇಲ್ಲದಿರುವಂಥ ಪರಿಸ್ಥಿತಿಯಾಗಿದೆ. ಇವರನ್ನು 15–20 ವರ್ಷಗಳಿಂದ ದುಡಿಸಿಕೊಳ್ಳುತ್ತಿದ್ದೀರಿ. ಅಂದರೆ, ಅವು ಅನವಶ್ಯಕ ಹುದ್ದೆಗಳಲ್ಲ, ಅವಶ್ಯಕವಾಗಿರುವಂಥ ಹುದ್ದೆಗಳು ಎನ್ನುವುದು ಅವರ ದುಡಿಮೆಯಿಂದಲೇ ಗೊತ್ತಾಗುತ್ತದೆ. ಆದ್ದರಿಂದ, ಅಗತ್ಯವಾಗಿರುವಂಥ ಈ

ಹುದ್ದೆಗಳಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ, ಅವರನ್ನು ಖಾಯಂ ಮಾಡಲು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ, ಇಷ್ಟೊಂದು ಹಣಕಾಸಿನ ಮುಗ್ಗಟ್ಟಿನ ಸಂದರ್ಭದಲ್ಲಿಯೂ ಕೂಡ ಸರ್ಕಾರಿ ಯಂತ್ರ ನಡೆಯುತ್ತಿದೆ ಎಂದರೆ, ಅದರಲ್ಲಿ ಈ 17–18 ಸಾವಿರ ದಿನಗೂಲಿ ನೌಕರರ ಪಾಲು ದೊಡ್ಡದಿದೆ. ನಾವು ಇದನ್ನು ಮರೆಯಬಾರದು. ನಿಮ್ಮನ್ನು ಖಾಯಂ ಮಾಡಲು ಆಗುವುದಿಲ್ಲ. ನೀವು ಕೋರ್ಟಿಗೆ ಹೋಗಿ ಎಂದು ಹೇಳುವುದು ಅಸಂಬದ್ಧ ಎಂದು ನಾನೂ ಕೂಡ ಅಂದುಕೊಂಡಿದ್ದೇನೆ. ಇವರನ್ನು ಖಾಯಂ ಮಾಡುವುದು ಇರಲಿ, 1984ರಿಂದ ಕೆಲಸ ಮಾಡಿದಂಥ ಅನೇಕ ಜನರನ್ನು ಏಕಾಏಕಿ ತೆಗೆದು ಹಾಕುವಂಥಾದ್ದು, ನೀನು ಕೆಲಸಕ್ಕೆ ಬೇಡ ಎಂದು ಹೇಳುವಂಥಾದ್ದು. ವರ್ಷಗಟ್ಟಲೆ ಕೆಲಸ ಮಾಡಿಸಿಕೊಂಡೂ ಸಂಬಳ ಕೊಡದೇ ಇರತಕ್ಕಂಥಾದ್ದು ಆಗುತ್ತಿದೆ. ಏಕೆಂದರೆ, ಹಿಂದೆ ಅವರಿಗೆ ಬ್ಯಾಂಕಿನಿಂದ ಸಂಬಳ ಕೊಡುತ್ತಿದ್ದರು. ಇತ್ತೀಚೆಗೆ ಏಕಾಏಕಿಯಾಗಿ 2–3 ತಿಂಗಳಿನಿಂದ ನಿಲ್ಲಿಸಿದ್ದಾರೆ. ನೀವು ನಿಮ್ಮ ಹೇಳಿಕೆಯಲ್ಲಿ ಸುಪ್ರೀಂ ಕೋರ್ಟ್‌ನ ಆದೇಶವನ್ನು ಕೋಟ್ ಮಾಡಿದ್ದೀರಿ. ಹೈಕೋರ್ಟಿನ ಆದೇಶ ಇದೆ, ನೀವು ಅಪೀಲ್ ಮಾಡಿ ಎಂದು ಹೇಳಿದ್ದೀರಿ. ಅದು ನನ್ನ ಹತ್ತಿರ ಇದೆ. ಇಷ್ಟರ ನಂತರವೂ ಕೂಡ, ನಿಮ್ಮ ಇಲಾಖೆಯಲ್ಲಿ ದಿನಾಂಕ 20–9–2001ರ ಆದೇಶದಂತೆ, ಎಂ.ಎನ್. ನಾಗೇಶ್ ಮತ್ತು ಶಾಮಾಚಾರಿ ಇವರ ಕೇಸ್‌ನಲ್ಲಿ, ಇವರನ್ನು ಖಾಯಂ ಮಾಡಿದ್ದೀರಿ. ರಾಜ್ಯ ಪತ್ರದ ಸಂಖ್ಯೆ 15–8–2002ರಂತೆ ಹೆಚ್.ಎಸ್. ರಘುಪತಿಗೌಡ ಮತ್ತು ಇತರ 141 ಜನರನ್ನು ಖಾಯಂ ಮಾಡುವಂಥ ಆದೇಶವನ್ನುನೀವು ಹೊರಡಿಸಿದ್ದೀರಿ. ಹಾಗೆಯೇ, ರಾಜ್ಯಪತ್ರ 11–9–2003ರಂತೆ ನಾಗರಾಜ್ ಮತ್ತು 50 ಜನ ದಿನಗೂಲಿ ನೌಕರರನ್ನು ಖಾಯಂ ಮಾಡಿದ್ದೀರಿ. ಇವರೆಲ್ಲಾ 1984ರ ನಂತರ ದಿನಗೂಲಿ ನೌಕರರಾಗಿ ನೇಮಕವಾಗಿರತಕ್ಕಂಥವರು. ರಾಜ್ಯಪತ್ರ 29–5–1997ರಂದು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಅಷ್ಟೂ ಜನರನ್ನೂ ದಿನಗೂಲಿ ನೌಕರರನ್ನು ಖಾಯಂ ಮಾಡಿದ್ದೀರಿ. ಇತ್ತೀಚೆಗೆ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿದ್ದಂಥ ಕೆಲವರನ್ನು ಖಾಯಂ ಮಾಡಿದ್ದೀರಿ. ಅಂದರೆ ನೀವೆಲ್ಲರೂ ಇಂಡಿವಿಜುಯಲ್ಲಾಗಿ ಕೋರ್ಟಿಗೆ ಹೋಗಿ ಆದೇಶ ತನ್ನಿ, ನಾವು ನಿಮ್ಮನ್ನು ಖಾಯಂ ಮಾಡುತ್ತೇವೆ ಹಾಗಿಲ್ಲದಿದ್ದರೆ, ಯೂನಿಯನ್‌ನಿಂದ ಒಟ್ಟಾಗಿ ಹೋಗಿರತಕ್ಕಂಥವರನ್ನು ಯಾರನ್ನೂ ಖಾಯಂ ಮಾಡಲು ಆಗುವುದಿಲ್ಲ ಎಂದು ಹೇಳುವಂಥ ಸರ್ಕಾರದ ನೀತಿಯ ಬಗ್ಗೆ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಇದೇ ಕೋರ್ಟಿನ ಆದೇಶದ ಪ್ರಕಾರ, ನಿಮಗೆ ಅಗತ್ಯವಿರುವ ಈ ಸಿಬ್ಬಂದಿಯನ್ನು, ಅವಶ್ಯಕವಾಗಿ ನೀವು ದುಡಿಸಿ ಕೊಳ್ಳುತ್ತಿರುವ ಈ ಸಿಬ್ಬಂದಿಯನ್ನು ಖಾಯಂ ಮಾಡಲು ನಿಮಗೆ ಏನು ತೊಂದರೆಯಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಈ ದುಬಾರಿ ದಿನಗಳಲ್ಲಿ ಅವರು ತಮ್ಮ ಬದುಕನ್ನು ಸಾಗಿಸುವುದಾದರೂ ಹೇಗೆ? ಅವರಿಗೆ 1000–1200 ರೂಪಾಯಿಗಳನ್ನು ಕೊಡುತ್ತೀರಿ. ಇವತ್ತು ಇವರ ಅವಶ್ಯಕತೆ ಎಷ್ಟರಮಟ್ಟಿಗೆ ಇದೆ ಎಂದರೆ, ನಮ್ಮ ತಾಲ್ಲೂಕು ಪಂಚಾಯಿತಿಯಲ್ಲಿ ಒಬ್ಬ ಡ್ರೈವರ್

ಇದ್ದಾನೆ. ಅವನು ಕಳೆದ 15 ವರ್ಷಗಳಿಂದ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದಾನೆ. ಅವನು ಗಾಡಿಯಿಂದ ಇಳಿದರೆ, ನಿಮ್ಮ ಎಕ್ಸಿಕ್ಯುಟಿವ್ ಆಫೀಸರ್ ಆಫೀಸಿನಿಂದ ಹೊರಗಡೆ ಹೋಗಲಿಕ್ಕೇ ಆಗುವುದಿಲ್ಲ. ಇಷ್ಟೊಂದು ಅವಶ್ಯಕವಾಗಿರುವಂಥ ಈ ಹುದ್ದೆಯನ್ನು ತುಂಬಿಕೊಳ್ಳಲು ನಿಮಗೆ ಏನು ತೊಂದರೆಯಾಗುತ್ತದೆ? ಅದನ್ನು ಖಾಲಿ ಬಿಟ್ಟು ನೀವೇನಾದರೂ ಸಾಧಿಸದಂತಾಗುತ್ತದೆಯೇ ಹಾಗೇಯೆ ಇಂಥವರು ಆಸ್ಪತ್ರೆಗಳಲ್ಲಿ, ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ವೈಯಕ್ತಿಕವಾಗಿ ನ್ಯಾಯಾಲಯಕ್ಕೆ ಹೋಗಲು ಶಕ್ತಿ ಇದೆಯೇ? ಆ ನೌಕರರ ಸಂಬಳವಿರುವುದೇ ಬಹಳ ಕಡಿಮೆ. ಅದರಿಂದ ಅವರು ಜೀವನ ಸಾಗಿಸಲೇ ಆಗುವುದಿಲ್ಲ. ಹೀಗಿರುವಾಗ ಅವನು ಹೈಕೋರ್ಟಿಗೆ ಹೇಗೆ ಹೋಗುತ್ತಾನೆ? ಆದ್ದರಿಂದಾಗಿ, ವೈಯಕ್ತಿಕವಾಗಿ ಇವರು ಕೋರ್ಟಿಗೆ ಹೋಗಲು ಬಿಡದೇ, ಒಂದು ಮಾನವೀಯ ನೆಲೆಯಲ್ಲಿ, ನಿಮಗೆ ಅಗತ್ಯವಿರುವಂಥ ಈ ಸಿಬ್ಬಂದಿಯನ್ನು ಖಾಯಂ ಮಾಡುವಂಥ ಅವಶ್ಯಕತೆ ಇದೆ. ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದವರಲ್ಲಿ ಅನೇಕ ಜನ ನಡುವೆಯೇ ಸತ್ತುಹೋದರು. ಇವತ್ತು ಅವರ ಕುಟುಂಬಗಳು ಬೀದಿಯಲ್ಲಿ ಬಿದ್ದಿವೆ. ಅನೇಕ ಜನರನ್ನು ದುಡಿಸಿಕೊಳ್ಳುತ್ತಿದ್ದಾರೆ. ನಿನ್ನ ಅವಶ್ಯಕತೆ ಇದೆ, ನೀನು ಇರಪ್ಪಾ ಎಂದು ಹೇಳುತ್ತಿದ್ದಾರೆ. ಆದರೆ ಅವರಿಗೆ ಕೂಲಿ ಕೊಡುತ್ತಿಲ್ಲ. ಇಂಥ ಒಂದು ದಯನೀಯವಾಗಿರತಕ್ಕಂಥ ಪರಿಸ್ಥಿತಿಯಲ್ಲಿ 17–18 ಸಾವಿರ ಜನರಿದ್ದಾರೆ. ಇವರನ್ನು ಖಾಯಂ ಮಾಡುವುದರಿಂದ ಸರ್ಕಾರಕ್ಕೆ ಬಹುದೊಡ್ಡ ಹೊರೆಯಾಗುತ್ತದೆ ಎಂದು ನನಗೇನೂ ಅನ್ನಿಸುವುದಿಲ್ಲ. ಇಷ್ಟು ವರ್ಷ ಅವರು 1000–1200 ರೂಪಾಯಿಗಳಿಗೆ ದುಡಿದು, ಸರ್ಕಾರವನ್ನು ನಡೆಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಆದ್ದರಿಂದಾಗಿ, ಇವರನ್ನು ಖಾಯಂ ಮಾಡಿಕೊಳ್ಳುವ ಅವಶ್ಯಕತೆ ಇದೆ. ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಹಿಂದೆ ಮಾನ್ಯ ಎಸ್.ಎಂ. ಕೃಷ್ಣಾರವರು ಮುಖ್ಯಮಂತ್ರಿಗಳಾಗಿದ್ದಾಗ, ಅವರೇ ನಮಗೆ ಒಂದು ಉತ್ತರವನ್ನು ಕೊಟ್ಟಿದ್ದರು. ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾಡಿದ್ದಂಥ ಒಂದು ಪ್ರಸ್ತಾಪಕ್ಕೆ ಉತ್ತರ ಕೊಡುವಾಗ ಹೇಳಿದ್ದರು. ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿದ್ದೇವೆ, ಆ ಕ್ಯಾಬಿನೆಟ್ ಸಬ್ ಕಮಿಟಿಯ ರಿಪೋರ್ಟ್ ಬಂದ ತಕ್ಷಣ ಅದನ್ನು ಮನಗಂಡು, ಇದಕ್ಕೇನಾದರೂ ಮಾಡಲು ನಾವು ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದರು, ನನಗೆ ಗೊತ್ತಿದ ಹಾಗೆ, ಕ್ಯಾಬಿನೆಟ್ ಸಬ್ ಕಮಿಟಿ ಈಗಾಗಲೇ ರಿಪೋರ್ಟ್‌ನ್ನು ಕೊಟ್ಟಾಗಿದೆ. ಈಗಾಗಲೇ ಇದಕ್ಕೆ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಕೂಡ ಒಂದು ಸಮಿತಿ ರಚನೆಯಾಗಿತ್ತು. ಸರ್ಕಾರ ಆ ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿದ್ದಾದರೂ ಏಕೆ? ಅಂದರೆ, ಈ ಒತ್ತಡದ ಆಧಾರದ ಮೇಲೆ, ಅವರ ಸೇವೆ ಅವಶ್ಯಕವಿದೆ ಎನ್ನುವುದನ್ನು ಮನಗಂಡು, ಅವರನ್ನು ಖಾಯಂ ಮಾಡಲು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿದರು. ಕ್ಯಾಬಿನೆಟ್ ಸಬ್ ಕಮಿಟಿಯ ರಿಪೋರ್ಟ್ ಬಂದ ನಂತರ ಅದನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ

ತೀರ್ಮ ಕೊಡಲು ಏನಾಗುತ್ತದೆ? ಈ ಬಗ್ಗೆ ಮಾನ್ಯ ಸಿಂಧ್ಯಾರವರು ಕೂಡಾ ಹಿಂದೆ ಒತ್ತಾಯ ಮಾಡಿದ್ದರು, ಇಲ್ಲಿ ನೋಡಿ, ಹಿಂದಿನ ಮುಖ್ಯಮಂತ್ರಿಗಳು ಹೇಳಿದ್ದಾರೆ, ಸುಪ್ರೀಂ ಕೋರ್ಟ್‌ನಲ್ಲಿ ಏನು ಡೈರೆಕ್ಷನ್ ಕೊಡುತ್ತಾರೆ, ಅಲ್ಲಿ ಏನು ತೀರ್ಮಾನವಾಗುತ್ತದೆ ಎನ್ನುವುದನ್ನು ಅವಲಂಬಿಸದೇ, ನಾವು ಏನು ಸಬ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ, ಅವರು ಇದರ ಬಗ್ಗೆ ಗಮನ ಹರಿಸುತ್ತಾರೆ, once and for all ಇದನ್ನು dispose off ಮಾಡಬೇಕು ಎಂಬ ಏನು ಸಲಹೆ ಇದೆ, ಅದನ್ನು ಅಂಗೀಕರಿಸುತ್ತೇನೆ" ಎಂದು ಹೇಳಿದ್ದಾರೆ. ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಈ ಸದನಕ್ಕೆ ಭರವಸೆ ಕೊಟ್ಟಿದ್ದಾರೆ, ಇವತ್ತಿನವರೆಗೆ ನೀವು ಏನೂ ಕೂಡ ಮಾಡಲಿಲ್ಲ. ಈ ನೌಕರರನ್ನು ಇದೇ ರೀತಿ ಬಿಡಬಾರದು. ಇವತ್ತು ಅವರೆಲ್ಲಾ retirement ಹತ್ತಿರ ಬಂದಿದ್ದಾರೆ. 15 ವರ್ಷ ಕೆಲಸ ಮಾಡಿ ನಾಳೆ ಇನ್ಯಾರೋ ಮನೆಗೆ ಹೋಗಿ ಕೂಲಿ ಮಾಡಿ ಎಂದು ಹೇಳಿದರೆ ಅವನು ದೈಹಿಕವಾಗಿ ಸಮರ್ಥನಾಗಿದ್ದಾನೆಯೇ? ಯಾವುದಾದರೂ ಕಂಪನಿಗೆ ಹೋದರೆ ಅವನನ್ನು ತೆಗೆದುಕೊಳ್ಳುತ್ತಾರೆಯೇ? ವಯೋಮಿತಿ ಮೀರಿ ಹೋಗಿದೆ. ಆದ್ದರಿಂದ ಇನ್ನೆಲ್ಲೂ ಸೇರಿಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಸರ್ಕಾರ ಅಗತ್ಯವಾಗಿ ಇರತಕ್ಕಂಥ ಅಂಶ ಎಂದು ಪರಿಗಣನೆ ಮಾಡಿ ದಯಮಾಡಿ ಇವರೆಲ್ಲರನ್ನು ಖಾಯಂ ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸದನದ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

† **ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್(ಗುಲ್ಬರ್ಗ)** : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಅಂಶವನ್ನು ಬೆಳಕಿಗೆ ತರುತ್ತೇನೆ. ಈಗಾಗಲೇ ಈ ಪ್ರಸ್ತಾವನೆ ಬಂದಿದ್ದು ಒಂದು ಉದಾಹರಣೆಯನ್ನು ಕೊಟ್ಟು ಹೇಳುತ್ತೇನೆ. ಸುಮಾರು 800 ಜನ ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನಲ್ಲಿದ್ದು ಇದು ಕೇವಲ ಅವರ ಬದುಕಿನ ಪ್ರಶ್ನೆ ಅಷ್ಟೇ ಅಲ್ಲ. ಸಾರ್ವಜನಿಕರ ಮೇಲೆ ಕೂಡ ಯಾವ ರೀತಿಯಾಗಿ ಇದರ ಪರಿಣಾಮ ಬೀಳುತ್ತದೆ ಎನ್ನುವುದನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು 800 ಜನ ದಿನಗೂಲಿ ನೌಕರರಿಗೆ ಜಿಲ್ಲಾಪಂಚಾಯತ್‌ನಲ್ಲಿ ನಾವು ಎಲ್ಲಿಂದ ಸಂಬಳ ಕೊಡುತ್ತಿದ್ದೇವೆ ಎನ್ನತಕ್ಕಂಥದ್ದನ್ನು ಸದನದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ರಸ್ತೆ ಅಭಿವೃದ್ಧಿಗೋಸ್ಕರ ನಾನ್‌ಪ್ಲಾನ್ ಎಂದು ಜಿಲ್ಲಾಪಂಚಾಯತ್‌ನಲ್ಲಿ ಅಂದರೆ ರಸ್ತೆ ಹಾಳಾಗಿರತಕ್ಕಂಥ ಸಂದರ್ಭದಲ್ಲಿ ಆ ರಸ್ತೆಯ ರಿಪೇರಿಯನ್ನು ಮಾಡಿಸಲಿಕ್ಕೆ ನಮ್ಮ ಜಿಲ್ಲಾಪಂಚಾಯತ್‌ನ ಲಿಂಕ್ಡ್ ಡಾಕ್ಯುಮೆಂಟ್‌ನಲ್ಲಿ 2 ಕೋಟಿ ರೂಪಾಯಿಗಳನ್ನು ಇವತ್ತು ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ಗೆ ಕೊಡುತ್ತಿದ್ದೇವೆ. ನಾನ್‌ಪ್ಲಾನ್‌ನಲ್ಲಿ ರಸ್ತೆ ರಿಪೇರಿಗೆ ಎಂದು ಇಟ್ಟಿರುವಂಥ 2 ಕೋಟಿ ರೂಪಾಯಿಗಳನ್ನು ನಾವು ಇವತ್ತು ದಿನಗೂಲಿ ನೌಕರರಿಗೆ ಸಂಬಳವಾಗಿ ಕೊಡುತ್ತಿದ್ದೇವೆ. ಇವತ್ತು ಅವರನ್ನು ನಾನು ಖಾಯಂಗೊಳಿಸದೇ ಇದ್ದರೆ, ಇಡೀ ಜಿಲ್ಲೆಗೆ ರಸ್ತೆ ರಿಪೇರಿಗೆಂದು ಇರುವಂಥ 2 ಕೋಟಿ ರೂಪಾಯಿಯನ್ನು ಅವರಿಗೆ ಸಂಬಳ ಎಂದು ಕೊಡುತ್ತಿದ್ದಾರೆ. ಹಳ್ಳಿಗಳಿಗೆ ಹೋಗತಕ್ಕಂಥ ರಸ್ತೆ ಇವತ್ತು

ಹದಗೆಟ್ಟು ಹೋಗಿದೆ, ಅವುಗಳನ್ನು ರಿಪೇರಿ ಮಾಡುವುದಕ್ಕೆ ನಮ್ಮ ಹತ್ತಿರ ಹಣ ಇಲ್ಲ. ಅಂದರೆ ಈ ಸಮಸ್ಯೆಗೆ ನಾವು ಪರಿಹಾರ ಹುಡುಕದಿದ್ದರೆ ಇಡೀ ನಮ್ಮ ರಾಜ್ಯದಾದ್ಯಂತ ಜಿಲ್ಲಾ ಪಂಚಾಯತ್‌ಗಳಲ್ಲಿ ರಸ್ತೆ ನಿರ್ವಹಣೆಗೆಂದೇ ಇಟ್ಟಿರತಕ್ಕಂಥ ಹಣ, ಯಾವುದು ಸಾರ್ವಜನಿಕ ಕೆಲಸಕ್ಕೆಂದು ಇಟ್ಟಿರತಕ್ಕಂಥ ಹಣವನ್ನು ಅವರ ಸಂಬಳಕ್ಕೆಂದು ಕೊಡುತ್ತಿದ್ದೇವೆ, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಇವರನ್ನು ಅತೀ ಶೀಘ್ರದಲ್ಲಿ ಖಾಯಂ ಮಾಡಬೇಕು. ರಸ್ತೆಗೆ ಇಟ್ಟ ಹಣವನ್ನು ಇವರಿಗೆ ಸಂಬಳದ ರೂಪದಲ್ಲಿ ಕೊಡುವುದರಿಂದ ರಸ್ತೆ ರಿಪೇರಿ ಆಗದೆ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸಾರ್ವತ್ರಿಕ ತೊಂದರೆಯಾಗುತ್ತಿದೆ ಎನ್ನುವುದನ್ನು ಈ ಸದನದ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

† **ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು)** : ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ರಚಿತವಾಗಿರುವಂಥ ಸಂಪುಟದ ಉಪಸಮಿತಿ ಸರ್ಕಾರದ ಇಚ್ಛೆ ವಿರುದ್ಧ ಅಥವಾ ಮುಖ್ಯಮಂತ್ರಿಗಳ ಇಚ್ಛೆಗೆ ವಿರುದ್ಧ ಯಾವುದೇ ರೀತಿಯ ತೀರ್ಪನ್ನು ಅಥವಾ ಸಲಹೆಯನ್ನು ಖಂಡಿತವಾಗಿ ಕೊಡಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ಎಲ್ಲಾ ಕಡೆಗಳಲ್ಲಿ ವಿಳಂಬಿತ ನೀತಿ ಪದೇ ಪದೇ ಎದ್ದು ಕಾಣುತ್ತಿದೆ. ಈ ವಿಷಯ ಕೊನೆಯದಾಗಿ Supreme Court ಗೆ ಬಂದಿದೆ, ಅಲ್ಲೂ ಕೂಡ ಅದರ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು. ತ್ರಿಸದಸ್ಯ ಪೀಠದ ಬದಲು ಪಂಚ ಸದಸ್ಯರ ಪೀಠ ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂಥ ತೀರ್ಮಾನ ಆಗಿದೆ. ಪದೇ ಪದೇ ಒಂದೇ ದಾರಿಯಲ್ಲಿ 12 ವರ್ಷ ಯಾರಾದರೂ ಹೋಗುವುದಿದ್ದರೂ ಕೂಡ ಅದು ಅವರದು ಅಧಿಕೃತ ದಾರಿಯಲ್ಲದಿದ್ದರೂ ಕೂಡ ಸಕ್ರಮಗೊಳಿಸುವಂಥದ್ದು ಅಥವಾ ನ್ಯಾಯಾಲಯದಲ್ಲಿಯೂ ಕೂಡ ಅದರ ಬಗ್ಗೆ ವ್ಯಾಜ್ಯವನ್ನು ಹೂಡುವ ಹಾಗಿಲ್ಲ. ಏಕೆಂದರೆ 12 ವರ್ಷಗಳಿಂದ ಇದೇ ದಾರಿಯಲ್ಲಿ ಹೋಗುತ್ತಿದ್ದೇನೆ ಎನ್ನುವಂಥದ್ದನ್ನು ಈ ದಾರಿಗೆ ಸಂಬಂಧಪಟ್ಟ disputes ನ್ಯಾಯಾಲಯದ ಮುಂದೆ ಬಂದಾಗ ಅದು ಎಲ್ಲಿಯಾದರೂ prove ಮಾಡಲಿಕ್ಕೆ ಸಾಧ್ಯವಿತ್ತು ಎಂದಾದರೆ ಅದು ಸಕ್ರಮಗೊಳ್ಳುತ್ತದೆ. ಇಂಥ ಹಿನ್ನೆಲೆಯಲ್ಲಿ 1984ರಿಂದ 2004ರ ವರೆಗೆ ಅಂದರೆ ಕಳೆದ 20 ವರ್ಷಗಳಿಂದ ಕೆಲವರು 18 ವರ್ಷಗಳಿಂದ ಕೆಲವರು 20 ವರ್ಷಗಳಿಂದಿರಬಹುದು. ನಿರಂತರವಾಗಿ ಸೇವೆ ಸಲ್ಲಿಸಿರುವಂಥ ದಿನಗೂಲಿ ನೌಕರರ ಮೇಲೆ ಮಾನವೀಯ ನೆಲೆಯಲ್ಲಿ ಸರ್ಕಾರ ಸ್ಪಂದಿಸಬೇಕು. Supreme Court ನ ತೀರ್ಪಿನ ಬಗ್ಗೆ ಕಾಯದೆ ತಾವೇ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡುತ್ತೇನೆ, ಈ ನೌಕರರು ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆ, 9 ಗಂಟೆ ತನಕ ಯಾವ ರೀತಿ ಸೇವೆ ಸಲ್ಲಿಸುತ್ತಿದ್ದಾರೆ ಎನ್ನುವುದನ್ನು ಪ್ರತ್ಯಕ್ಷ ನಾನು ಕಂಡಿದ್ದೇನೆ. ಇಂಥವರ ಮೇಲೆ ಮಾನವೀಯ ಅನುಕಂಪದ ಆಧಾರದ ಮೇಲೆ ತಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಸರ್ಕಾರದ ಮುಂದೆ ಇಡಲಿಕ್ಕೆ ಇಚ್ಛಿಸುತ್ತೇನೆ.

† **ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ)** : ಮಾನ್ಯ ಅಧ್ಯಕ್ಷರೆ, ಈ ದಿನಗೂಲಿ ನೌಕರರನ್ನು ಸಕ್ರಮಗೊಳಿಸಬೇಕು. ಎನ್ನುವ ಗಮನ ಸೆಳೆಯುವ ಸೂಚನೆಯಲ್ಲಿ ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ನಾನು ಹಿಂದೆ ಎರಡು ಅವಧಿಯಲ್ಲಿ ಶಾಸಕನಾಗಿದ್ದಾಗಲೂ ಕೂಡ ಎರಡು ಸಂದರ್ಭದಲ್ಲಿ ಇದನ್ನು ಸದನದಲ್ಲಿ ಸರ್ಕಾರಕ್ಕೆ ಕೇಳಿದ್ದೆವು. ಈ ದಿನಗೂಲಿ ನೌಕರರ ಭವಿಷ್ಯ ಬಹಳ ತೂಗುಯ್ಯಲೆಯಲ್ಲಿದೆ. ಅವರನ್ನು ಖಾಯಂ ಮಾಡದಿರುವುದರಿಂದಾಗಿ ಅವರು ತಮ್ಮ ಸಂಸಾರವನ್ನು ಸಮರ್ಪಕವಾಗಿ ನಡೆಸುವುದಕ್ಕೆ ಆಗುತ್ತಿಲ್ಲ. ಎನ್ನುವುದರ ಜೊತೆಜೊತೆಯಲ್ಲಿ ತಮ್ಮ ನೌಕರಿಯನ್ನೂ ಸಹ ವಿಶ್ವಾಸದಲ್ಲಿ ಮಾಡುವುದಕ್ಕೆ ಆಗದಿರುವ ಪರಿಸ್ಥಿತಿಯಲ್ಲಿ ಅವರೆಲ್ಲರೂ ಇದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಸುಮಾರು 17 ಸಾವಿರ ಜನ ದಿನಗೂಲಿ ನೌಕರರಿದ್ದು ಅವರನ್ನು ಇವತ್ತು ಖಾಯಂಗೊಳಿಸಬೇಕೆನ್ನುವಂಥದ್ದರ ಅಡಿಯಲ್ಲಿ ಇದ್ದಾರೆ. Supreme Court ನ ತೀರ್ಮಾನ ಬಂದ ನಂತರದಲ್ಲಿ ಅದನ್ನು ಖಾಯಂಗೊಳಿಸುವುದಕ್ಕೆ ತಕ್ಷಣ ಮಾಡುತ್ತೇವೆಂದು ಸರ್ಕಾರ ಹೇಳುತ್ತಿದೆ. ಹಿಂದಿನ ಸರ್ಕಾರದಲ್ಲಿ ಈ ಬಗ್ಗೆ ಕ್ಯಾಬಿನೆಟ್ ಸಬ್‌ಕಮಿಟಿ ಅನೇಕ ಸಲ ಸೇರಿದೆ. ಸಚಿವ ಸಂಪುಟದ ಉಪಸಮಿತಿಯಲ್ಲಿ ಈ ವಿಷಯಗಳು ಪ್ರಸ್ತಾಪವಾಗಿ ಮತ್ತೆ ಅದು ನೆನೆಗುದಿಗೆ ಬೀಳುತ್ತಿದೆ. ಎಲ್ಲೋ ಒಂದು ಕಡೆಯಲ್ಲಿ ಈ ಕ್ಯಾಬಿನೆಟ್ ಸಬ್ ಕಮಿಟಿ ಸೇರುವುದು. ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತೇವೆಂದು ಹೇಳುವುದು. ಇದು ಕೇವಲ ದಿನಗೂಲಿ ನೌಕರರ ಕಣ್ಣೊರೆಸುವಂಥ ತಂತ್ರವಾಗಿದೆ ಎನ್ನುವಂಥ ಭಾವನೆ ಬರುತ್ತಿದೆ. ಅವರ ಸಮಸ್ಯೆಗಳಿಗೆ ನಿಶ್ಚಿತವಾದಂಥ ಸಮಯದ ಮಿತಿಯೊಳಗಡೆಯಲ್ಲಿ ಅವರನ್ನು ಖಾಯಂಗೊಳಿಸುವುದಕ್ಕೆ ಆಗದಿರುವುದನ್ನು ನಾವು ಕಾಣುತ್ತಿದ್ದೇವೆ. ಕ್ಯಾಬಿನೆಟ್ ಸಬ್‌ಕಮಿಟಿಯವರು ಶಿಫಾರಸ್ಸು ಮಾಡಿದ್ದಾರೆಂದು ಹೇಳಿದಿರಿ. ಆ ಕ್ಯಾಬಿನೆಟ್ ಸಬ್‌ಕಮಿಟಿಯವರು ಏನು ಶಿಫಾರಸ್ಸು ಮಾಡಿದ್ದಾರೆ. ಎಂಬುದು ಹೊರಗಡೆ ಗೊತ್ತಾಗುತ್ತಿಲ್ಲ. Supreme Court ನ ನಿರ್ಧಾರ ಇತ್ಯರ್ಥಪಡಿಸಬೇಕಲ್ಲಾ ಅದಕ್ಕೆ ರಾಜ್ಯಸರ್ಕಾರದಿಂದ ಯಾವುದೆಲ್ಲಾ ಪ್ರಯತ್ನಗಳು ಆಗಬೇಕೋ ಆ ಪ್ರಯತ್ನಗಳನ್ನು ಮಾಡುವುದಕ್ಕೂ ಕೊರತೆ ಇದೆ ಎನ್ನುವ ಭಾವನೆಗಳು ಬರುತ್ತಿವೆ. ಹಾಗಾಗಿ 17 ಸಾವಿರ ಕುಟುಂಬಗಳು, 17 ಸಾವಿರ ನೌಕರರು ಅವರ ಕುಟುಂಬ ಎಷ್ಟು ಕಷ್ಟದಲ್ಲಿದೆ, ಅವರು ದಿನನಿತ್ಯ ಕಷ್ಟಪಡುತ್ತಿದ್ದಾರೆ, ಅವರ ಕೆಲಸ ಸಾಮಾನ್ಯ ಕೆಲಸ. ದಿನಗೂಲಿ ನೌಕರರೆಂದರೆ ಅವರು ಎಂಥೆಂಥ ಕೆಲಸ ಮಾಡುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಅಂಥ ಸಾಮಾನ್ಯ ಕೆಲಸ ಮಾಡುವಂಥವರನ್ನು ಅವರಿಗೆ ಪಗಾರ ತಿಂಗಳು ತಿಂಗಳು ಆಗುವುದಿಲ್ಲ. 2 ತಿಂಗಳಿಗೋ 3 ತಿಂಗಳಿಗೋ, ಒಂದೊಂದು ಸಲ ಎಲ್‌ಒಸಿ ಬಂದ ಹಾಗೆ 6 ತಿಂಗಳಿಗೆ ಒಂದೊಂದು ಸಲ ಪಗಾರ, ಒಂದೊಂದು ಡಿಪಾರ್ಟ್‌ಮೆಂಟ್‌ನಲ್ಲಿ ಒಂದೊಂದು ರೀತಿ ಇದೆ. ಅದರಲ್ಲಿ ಕೋರ್ಟಿಗೆ ಹೋದಂಥ ಕೆಲವರಿಗೆ ಉದ್ಯೋಗ ಕೊಟ್ಟಿರುವುದು ಇದೆ. ಬೇರೆ ಬೇರೆ ಇಲಾಖೆಯಿಂದ 4 ಜನ 6 ಜನ ಹೀಗೆ

ಕೋರ್ಟ್‌ಗೆ ಹೋಗಿ ಆರ್ಡರನ್ನು ತಂದುಕೊಂಡು ಅವರು ಮತ್ತೆ ಉದ್ಯೋಗಕ್ಕೆ ಸೇರಿದ್ದಾರೆ. ಹಾಗಾಗಿ ಈ 17 ಸಾವಿರ ಜನ individual ಆಗಿ ಕೋರ್ಟ್‌ಗೆ ಹೋಗುವುದಕ್ಕೆ ಸಾಧ್ಯವಿಲ್ಲದಿರುವಂಥ ವಿಷಯ. ಹಾಗಾಗಿ ಸರ್ಕಾರ ಸಾಮೂಹಿಕವಾದಂಥ ನಿರ್ಣಯ ಮಾಡಬೇಕಾಗುತ್ತದೆ. ಇದು 17 ಸಾವಿರ ಕುಟುಂಬಕ್ಕೆ ಅನ್ವಯವಾಗುವಂಥ ಒಂದು ಮಹತ್ತರವಾದ ವಿಷಯ. ಇದು 20 ವರ್ಷದಿಂದ ನೆನೆಗುದಿಗೆ ಬಿದ್ದಿರುವಂಥ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಅಗ್ರಹಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸಮರ್ಪಕವಾದ ಉತ್ತರವನ್ನು ನಮ್ಮ ಮಾನ್ಯ ಎಂ.ಪಿ. ಪ್ರಕಾಶ್‌ರವರು ಕೊಟ್ಟಿದ್ದಾರೆ. Supreme Court ನ ಆದೇಶದ ಮೇಲೆ 1984 ಜುಲೈ ವರೆಗೆ ದಿನಗೂಲಿ ನೌಕರರನ್ನು ಏನು ಖಾಯಂ ಮಾಡಿದ್ದಾರೆ. ನಂತರ 1984 ರಿಂದ ಇಲ್ಲಿಯವರೆಗೆ ಸುಮಾರು 20 ವರ್ಷಗಳಾಯಿತು. ಈ 20 ವರ್ಷಗಳಿಂದ ಯಾರು ದಿನಗೂಲಿ ನೌಕರರು ಒಂದು ರೀತಿಯ ಜೀತದಾಳುಗಳಂತೆ ಕೆಲಸ ಮಾಡುತ್ತಿದ್ದಾರೆ. ಬೇರೆ ನೌಕರರು ಯಾವ ರೀತಿ ಕೆಲಸ ಮಾಡುತ್ತಾರೆ ಅದಕ್ಕಿಂತ ಹೆಚ್ಚು ಕೆಲಸವನ್ನು ಅವರಿಂದ ನಾವು ತೆಗೆದುಕೊಳ್ಳುತ್ತಿದ್ದೇವೆ. ನಾವು ಯಾವಾಗ ಖಾಯಮಾತಿ ಮಾಡಿಸಬೇಕು? ಈ ದಿನಗೂಲಿ ನೌಕರರು ನಮ್ಮ ಅಪೇಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತಿಲ್ಲ. ಅವರಿಂದ ಉಪಯೋಗವಾಗುತ್ತಿಲ್ಲವೆನ್ನುವಂಥದ್ದು ನಮಗೆ ಏನೂ ಇಲ್ಲ. Supreme Court ಮುಂದೆ ಕೇಸ್ ಇದ್ದು. ಈಗ ತ್ರಿಸದಸ್ಯ ಪೀಠದ ಮುಂದೆ ಬಂದದ್ದಾಯಿತು. ಈಗ 5 ಜನ ನ್ಯಾಯಾಧೀಶರ ನೇಮಕ ಮಾಡಿ ಅವರು ಅಂತಿಮ ತೀರ್ಮಾನ ಕೊಡಬೇಕು ಅದು ಸರಿ ಇದೆ. ಆದರೆ ಸರ್ಕಾರದವರು ಇದಕ್ಕೆ ಬದ್ಧರಾಗಿದ್ದೀರಾ? ಈ ಸಮಸ್ಯೆಯನ್ನು Supreme Court ನವರ ಗಮನಕ್ಕೆ ತಂದು ಈ ದಿನಗೂಲಿ ನೌಕರರಿಗೆ ಅನುಕೂಲ ಮಾಡುವ ರೀತಿಯಲ್ಲಿ ತಾವು ವರ್ತನೆ ಮಾಡುವುದಕ್ಕೆ ಸಿದ್ಧರಿದ್ದೀರಾ ಎನ್ನುವುದು ಬಹಳ ಮೂಲಭೂತವಾದ ಪ್ರಶ್ನೆಯಾಗಿದೆ. ಏಕೆಂದರೆ ರಾಜ್ಯದ ಯಾವುದೇ ಮೂಲೆಗೆ ಹೋದರೂ ಸಹ, ಅಲ್ಲಿ ಯಾವುದೋ ಒಂದು ಗೆಸ್ಟ್ ಹೌಸ್‌ಗೆ ಹೋಗಿ ನಾವು ಉಳಿದರೂ ಸಹ ಅಲ್ಲಿರುವಂಥ ದಿನಗೂಲಿ ನೌಕರರಿಂದ ಹಿಡಿದು ಈ 17 ಸಾವಿರದ ಜನರ ಒಬ್ಬೊಬ್ಬರ ಕರ್ಮಕಥೆ ನಿಮಗೆ ಹೇಳಬೇಕೆಂದರೆ ಅವರು ಸೇರಿದಾಗಲೇ ಅವರ ವಯೋಮಿತಿ ಹತ್ತಿರ ಬಂದಿತ್ತು. ಈಗಾಗಲೇ ಹೆಚ್ಚು ಕಡಿಮೆ retire ಆಗುವ stage ಗೆ ಬಂದಿದ್ದಾರೆ. ಅವರು ಮನೆಗೆ ಹೋಗುವುದರೊಳಗಾಗಿ ಒಂದಷ್ಟು ಸಿಗಬಹುದು ಅಥವಾ ನೆಮ್ಮದಿಯಿಂದ ಊಟ ಮಾಡಬಹುದು ಎನ್ನುವ ಸ್ಥಿತಿಯಲ್ಲಿ ಅವರಿಲ್ಲ. ಆದ್ದರಿಂದ ದಯಮಾಡಿ ಇದನ್ನು ಮಾನವೀಯ ದೃಷ್ಟಿಯಿಂದ ಸಹಾನುಭೂತಿಯಿಂದ ಪರಿಗಣಿಸಿ ಇದಕ್ಕೊಂದು ಪರಿಹಾರ ಹುಡುಕುವಂಥ. Supreme Court ಈ ತರಹ ದಿನಗೂಲಿ ನೌಕರರ ಪರವಾಗಿ ಸ್ಪಂದಿಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರ ವರ್ತಿಸುತ್ತದೆಯೇ, ಆ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವೇನು ಎಂಬುದನ್ನು

ತಾವು ಹೇಳಿದರೆ ಆ 17 ಸಾವಿರ ದಿನಗೂಲಿ ನೌಕರರಿಗೆ ಅನುಕೂಲವಾಗಬಹುದು. ದಯಮಾಡಿ ಅವರಿಗೆ ಸಹಾಯ ಮಾಡಿ ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಎಲ್ಲಾ ಸದಸ್ಯರ ಭಾವನೆಗಳನ್ನು ಸರ್ಕಾರ ಅರ್ಥಮಾಡಿಕೊಳ್ಳುತ್ತದೆ. ಸರ್ಕಾರದ ಇತಿಮಿತಿಗಳನ್ನು ಮತ್ತು ಅದರ ಸಂಕಷ್ಟಗಳನ್ನು ಮಾನ್ಯ ಸದಸ್ಯರೂ ಕೂಡ ಅರ್ಥಮಾಡಿಕೊಳ್ಳಬೇಕೆಂದು ತಮ್ಮಲ್ಲಿ ನಾನು ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಇಲ್ಲಿ ಒಂದು ವಿಚಾರಕ್ಕೆ ಸಂಬಂಧಿಸಿದಂತಹದಲ್ಲ, ಇಲ್ಲಿ ನಾಲ್ಕಾರು ಆಯಾಮಗಳಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಈಗಾಗಲೇ ನಾವು ಹೇಳಿದಂತೆ ಸಾಂದರ್ಭಿಕವಾದಂಥ ದಿನಗೂಲಿಗಳನ್ನು ನೇಮಕ ಮಾಡಿಕೊಳ್ಳುತ್ತೇವೆ. ಸಾಂದರ್ಭಿಕವಾದಂಥ ದಿನಗೂಲಿಗಳೆಂದರೆ ಅಲ್ಲಿ ಅಗತ್ಯವಾದಂಥ ಕೂಡಲೇ ನಿರ್ವಹಿಸಬೇಕಾದಂಥ ಕೆಲಸಕ್ಕಾಗಿ ಅವರನ್ನು ನೇಮಕ ಮಾಡಿಕೊಳ್ಳುತ್ತೇವೆ. ಅವರಿಗೆ ಕನಿಷ್ಠ ವೇತನವನ್ನು ಕೊಡಬೇಕೆನ್ನುವ ನಿಯಮ ಇದೆ. ಆ ನಿಯಮಾವಳಿಗಳ ಪ್ರಕಾರ ಅವರಿಗೆ ಹಣವನ್ನು ಸಂದಾಯ ಮಾಡುತ್ತಿದ್ದೇವೆ. ಆದರೆ ಅವರು ನಮ್ಮ ಖಾಯಂ ಸರ್ಕಾರಿ ನೌಕರರಲ್ಲ. ಖಾಯಂ ನೌಕರರಿಗೆ ಸಿಗುವಂಥ pension ಮೊದಲಾದವುಗಳಿಗೆ ಸಂಬಂಧಿಸಿದಂಥ, ಯಾವ ಅನುಕೂಲಗಳು ಸೌಕರ್ಯಗಳು ಅವರಿಗೆ ಸಿಗುವುದಿಲ್ಲ.

2.00 ಪಿಎಂ

ಅದನ್ನು ಬಿಟ್ಟರೆ, ನಮ್ಮಲ್ಲಿ ಕನಿಷ್ಠ ವೇತನ ಕೊಡಬೇಕೆನ್ನುವ ನಿಯಮಾವಳಿಗಳೇನಿವೆ. ಆ ನಿಯಮಕ್ಕನುಗುಣವಾದ ರೀತಿಯಲ್ಲಿ, Government is a model employer ಎಂದು ಕರೆಯುತ್ತೇವೆ. ಆದುದರಿಂದ ಅದೊಂದು ಆದರ್ಶವಾದ, ತಾನೇ ನಿರ್ವಹಿಸುವ ಒಂದು ಕಾರ್ಯಕ್ರಮದ ಅಡಿಯಲ್ಲಿ ಸಾಂದರ್ಭಿಕವಾಗಿ ಕೆಲವು ದಿನಗೂಲಿಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆ. ಅಯಾಯ ಕೆಲಸಗಳಿಗೆ ನಿರ್ವಹಣೆ ಮಾಡಬೇಕೆಂಬುವ ಉದ್ದೇಶದಿಂದ ಈ ನೇಮಕಾತಿ ಮಾಡಿಕೊಂಡಿರುತ್ತೇವೆ. ಇವರನ್ನು ಖಾಯಂಗೊಳಿಸಬೇಕೆಂಬುವ ಮಾನವೀಯ ದೃಷ್ಟಿಕೋನದಿಂದ ತಾವು ಒತ್ತಾಯಿಸುತ್ತಿದ್ದೀರಿ. ಇದು ಸ್ವಾಗತಾರ್ಹವಾದ ವಿಚಾರ. ಆದರೆ, ವಾಸ್ತವ ಸಂಗತಿಗಳು ಬೇರೆ ಬೇರೆ. ಇದರಲ್ಲಿ 3–4 ವಿಚಾರಗಳಿವೆ. ಕಳೆದ 20 ವರ್ಷಗಳ ನಂತರ, ಈಗ ನ್ಯಾಯಾಲಯದಲ್ಲಿರುವ ತೀರ್ಮಾನ, ದಿ:1.7.1984ರ ನಂತರ, ಯಾವುದೇ ನೇಮಕಾತಿಗಳನ್ನು ಮಾಡಿದರೆ, ಅವರನ್ನು ಖಾಯಂ ನೌಕರರನ್ನಾಗಿ ಮಾಡಿಕೊಳ್ಳುವುದು ಕಾನೂನು ಬಾಹಿರವೆಂದು ಹೇಳಿ ಈಗಾಗಲೇ ಹೈಕೋರ್ಟ್ ನಿರ್ಣಯ ಕೊಟ್ಟಿದೆ. ಇದಾದಮೇಲೆ, ಸುಪ್ರೀಂ ಕೋರ್ಟ್‌ನವರು ತ್ರಿಸದಸ್ಯ ಪೀಠದಲ್ಲಿ ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಹೇಳಿದಾಗ, ಬಹಳ ಮುಖ್ಯವಾದ ಈ ಸಮಸ್ಯೆಗಳು ಮತ್ತು ಸಂವಿಧಾನಾತ್ಮಕವಾಗಿರುವ 16(4)ರ ಬಿಕ್ಕಟ್ಟು ಬಂದಿದ್ದರಿಂದ, 5 ಜನ ಸದಸ್ಯರ ಒಂದು ಪೀಠ ಇದನ್ನು ನಿರ್ಣಯಿಸಬೇಕೆಂದು ಪ್ರಸ್ತಾಪಿಸಿದೆ. ಅಂದರೆ, ದಿನಾಂಕ:3.8.04ರಿಂದ ಈ ವಿಚಾರ ಸುಪ್ರೀಂಕೋರ್ಟ್‌ನ 5 ಜನ

ಸದಸ್ಯರ ನ್ಯಾಯ ಪೀಠದ ಮುಂದೆ ಇತ್ಯರ್ಥಕ್ಕಾಗಿ, ವಿಚಾರಣೆಗಾಗಿ ಬರುತ್ತದೆಂದು ನಮಗೆ ಈಗ ಮಾಹಿತಿ ಬಂದಿದೆ. ಇಲ್ಲಿ ಮಾನ್ಯ ಸದಸ್ಯರಾದ ಯೋಗೀಶ್ ಭಟ್‌ರವರು ಮಾತನಾಡುವಾಗ, ಮುಖ್ಯಮಂತ್ರಿಗಳ ಆಶಯಕ್ಕೆ ವಿರುದ್ಧವಾಗಿ ಸಂಪುಟದ ಉಪಸಮಿತಿ ನಿರ್ಣಯ ತೆಗೆದುಕೊಳ್ಳಬಾರದೆಂದು ಹೇಳಿದರು. ಒಬ್ಬ ಮುಖ್ಯಮಂತ್ರಿ ಅಭಿಪ್ರಾಯ ವ್ಯಕ್ತ ಮಾಡುವ ಆಶಯ ಸರ್ಕಾರಿ ನಿರ್ಧಾರವಾಗುವುದಿಲ್ಲ. ಸಚಿವಸಂಪುಟದ ಸಭೆ ಎಂದು ಹೇಳಿದಾಗ, he is the first amoung the equall ಎಂದು ಕರೆಯುತ್ತೇವೆ. ಅಲ್ಲಿರುವ ಸಮಿತಿ, ಜನರ ಸದಸ್ಯರಲ್ಲಿ ಆತ ಮುಖ್ಯಸ್ಥ ಮತ್ತು ಅದರ ಮೊದಲನೆಯವ ಅನ್ನುವುದಿರುತ್ತದೆ. ಇದು ನಮ್ಮ ಪಾರ್ಲಿಮೆಂಟರಿ ಸಿಸ್ಟಂ ಆಫ್ ಡೆಮಾಕ್ರಸಿ,- ಆ ಕಾರಣಕ್ಕಾಗಿ, ಸಚಿವ ಸಂಪುಟದ ಉಪ ಸಮಿತಿ ಏಕೆ ಮಾಡುತ್ತದೆ ಅಂದರೆ, ಸಚಿವರ ಸಂಪುಟ ಬಹಳ ದೊಡ್ಡದಾಗಿರುತ್ತದೆ, ಬಹಳ ಗಹನವಾಗಿರುವ ಕಾನೂನಿನ ವಿಚಾರಗಳು ಇದರಲ್ಲಿ ಲಭ್ಯತೆ ಇರುತ್ತದೆ. ಆ ಕಾರಣಕ್ಕಾಗಿ, ಚಿಕ್ಕ ಉಪ ಸಮಿತಿ ಅದರ ಎಲ್ಲಾ ವಿವಿಧ ಆಯಾಮಗಳನ್ನು ಪರಿಶೀಲಿಸಿ, ಒಂದು ವರದಿಯನ್ನು ಸಂಪುಟಕ್ಕೆ ಕೊಡಬೇಕೆಂಬ ಕಾರಣದಿಂದ ಅಲ್ಲಿ ಅವತ್ತಿನ ಪಂಚಾಯತ್‌ರಾಜ್, ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಉಪ ಸಮಿತಿಯನ್ನು ರಚಿಸಲಾಗಿದ್ದು. ಅದರ ಜೊತೆಗೆ ಒಬ್ಬ ಮುಖ್ಯ ಕಾರ್ಯದರ್ಶಿಗಳು ಅಥವಾ ಅವರ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿಯೂ ಈ ವಿಚಾರದಲ್ಲಿ ಚರ್ಚೆಯಾಗಿದೆ. ಒಂದು ವರದಿ ಕೂಡ ಬಂದಿದೆ. ಈಗ ಸಚಿವ ಸಂಪುಟದ ಸಭೆ ಈ ಎಲ್ಲಾ ವಿಚಾರಗಳನ್ನು ಕೂಲಂಕಷವಾಗಿ ಪರಿಗಣಿಸಿ, ತನ್ನದೇ ಆದ ವಿವೇಕದಿಂದ ಇದು ಸಾಧುವಾದಂಥ ಕೆಲಸವಲ್ಲ, ಎಂಬುದನ್ನು ಇದರಲ್ಲಿ ಅಡಕವಾಗಿರುವ ವಿಚಾರಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಗೆಳೆಯರು ಒಪ್ಪಿಕೊಳ್ಳುತ್ತಾರೆ. ಸಾಂದರ್ಭಿಕವಾಗಿ ದಿನಗೂಲಿಗಳನ್ನು ನೇಮಕಾತಿ ಮಾಡಿದಾಗ ನಾವು ಮೀಸಲಾತಿ ವಿಚಾರದಲ್ಲಿ ಚರ್ಚೆ ಮಾಡುವುದಿಲ್ಲ. ಯಾರು ಯಾರು ಅಲ್ಲಿ ಲಭ್ಯರಿರುತ್ತಾರೋ ಅವರನ್ನು ದಿನಗೂಲಿಗಳನ್ನಾಗಿ ಸೇರಿಸಿರುತ್ತೇವೆ. ಆದರೆ, ನಮ್ಮ ಸರ್ಕಾರದ ನಿಯಮಾವಳಿಗಳ ಪ್ರಕಾರ. ನೇಮಕಾತಿ ಮಾಡುವಾಗ ಮೀಸಲಾತಿಯನ್ನು ಹಿಂದುಳಿದ ಜನಾಂಗಕ್ಕೆ, ಪರಿಶಿಷ್ಟ ಜನಾಂಗಕ್ಕೆ, ಪರಿಶಿಷ್ಟ ವರ್ಗಕ್ಕೆ, ಮಹಿಳೆಯರಿಗೆ, ಅಂಗವಿಕಲರಿಗೆ ಇಷ್ಟು ಎನ್ನುವ ಮೀಸಲಾತಿಯನ್ನು ಮಾಡಿರುತ್ತೇವೆ. ಈಗ ಅವರು ಸುಮಾರು 17 ಸಾವಿರಕ್ಕಿಂತ ಹೆಚ್ಚು ಜನ ಇದ್ದು, ಇವರನ್ನು ಖಾಯಂಗೊಳಿಸಿದರೆ, ಅದು ಕಾನೂನುಬಾಹಿರವಾಗುತ್ತದೆ. ಒಂದೇ ವರ್ಗಕ್ಕೆ ಸೇರುವ ಸಾಮಾಜಿಕ ನ್ಯಾಯದ ವಿರುದ್ಧವಾದ ನಿರ್ಣಯವಾಗುವುದೊಂದೇ ಅಲ್ಲ, ಸಂವಿಧಾನದ 16(4)ರ ಕಲಂಗೆ ಅದು ವಿರುದ್ಧವಾಗಿರುವ ನಿಲುವು ಆಗುತ್ತದೆ. ಈ ಒಂದು ಸಂದರ್ಭದಲ್ಲಿ ಈ ಕ್ರಮವನ್ನು ಕೈಗೊಳ್ಳಬೇಕೇ ಅಥವಾ ಬೇಡವೇ ಎನ್ನುವ ಬಗ್ಗೆ 5 ಜನ ನ್ಯಾಯಾಧೀಶರಿರುವ ಪೀಠ ಇದರ ಬಗ್ಗೆ ನಿರ್ಣಯ ಮಾಡುತ್ತದೆ. ಆ ನಿರ್ಣಯ ಬಂದ ತಕ್ಷಣವೇ, ಸರ್ಕಾರ ಮತ್ತೆ ಇದರ ಬಗ್ಗೆ ಯೋಚನೆ ಮಾಡುತ್ತದೆ. ಇದರ

ಜೊತೆಗೆ, ಸರ್ಕಾರದ ಆದಾಯದ ಮೇಲೆ ಈಗಿರುವ ಯೋಜನೇತರ ವೆಚ್ಚವನ್ನು ಕಡಿಮೆ ಮಾಡುವ ಕಾರಣಕ್ಕಾಗಿ ಆಡಳಿತ ಸುಧಾರಣಾ ಸಮಿತಿ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿರುವ ಒಂದು ಸಮಿತಿ ಕೊಟ್ಟಿರುವ ಶಿಫಾರಸ್ಸು ಇದೆ, ಅನುತ್ಪಾದಿಕವಾಗಿರತಕ್ಕಂಥ ವೆಚ್ಚದ ಮೇಲೆ ಕಡಿವಾಣ ಮತ್ತು ಈ ರೀತಿ ಯೋಜನೇತರ ವೆಚ್ಚದ ಮೇಲೆ ಇರತಕ್ಕ ನಿಯಂತ್ರಣ ಇವು ಬರಬೇಕೆಂದು ಹೇಳಿದಾಗ, ಎಲ್ಲೆಲ್ಲಿ ಖಾಲಿ ಹುದ್ದೆಗಳಿವೆ, ಆ ಖಾಲಿ ಹುದ್ದೆಗಳ ಶೇಕಡ 80ರಷ್ಟನ್ನು ನೇಮಕಾತಿ ಮಾಡಬಾರದೆಂದು ಹೇಳಿ, ಕಾನೂನು ಮಾಡಬಾರದೆಂದು ಹೇಳಿ, ಕಾನೂನು ಸುಧಾರಣಾ ಇಲಾಖೆ ಕೊಟ್ಟಿರುವ ವರದಿಯನ್ನು ನಾವು ಅಂಗೀಕರಿಸಿದ್ದೇವೆ. ಆ ಹಿನ್ನೆಲೆಯಲ್ಲಿ ಬಹಳ ಕಷ್ಟ ಬರುತ್ತದೆ. ನಾನೂ ಕೂಡ ಈ ವಿಚಾರದಲ್ಲಿ ಸಹಮತ ವ್ಯಕ್ತಪಡಿಸುತ್ತೇನೆ. ಒಂದು ಸುಖೀ ರಾಜ್ಯದ ಕಲ್ಪನೆ ಬಂದಾಗ, ಎಲ್ಲರಿಗೂ ಕೂಡ, ಒಳ್ಳೆಯ ಬದುಕನ್ನು ಕೊಡಬೇಕಾಂಥದ್ದು ಸರ್ಕಾರದ ಮತ್ತು ಸಮಾಜ ಕರ್ತವ್ಯವಿರುತ್ತದೆ. ಆದರೆ, ಇವತ್ತಿನ ನಮ್ಮ ಸಂಪನ್ಮೂಲಗಳ ಇತಿಮಿತಿಗಳಲ್ಲಿ 17 ಸಾವಿರಕ್ಕಿಂತ ಹೆಚ್ಚು ಜನರನ್ನು ನೇಮಕಾತಿ ಮಾಡುವುದರಿಂದ, ಈ ಎಲ್ಲ ಸಮಸ್ಯೆಗಳಿಗೆ ಪಾಲುದಾರರಾಗುತ್ತೇವೆ. ಈ ಕಾರಣಕ್ಕಾಗಿ, ಈ ವಿಚಾರದಲ್ಲಿ ಸಂಪೂರ್ಣವಾದ ಮಾನವೀಯ ದೃಷ್ಟಿಕೋಣ ಈ ಸರ್ಕಾರಕ್ಕಿದೆ. ಅವರನ್ನು ನೇಮಕಾತಿ ಮಾಡಬೇಕೆನ್ನುವ ಸಂಪೂರ್ಣವಾದ ರಾಜಕೀಯ ಇಚ್ಛಾಶಕ್ತಿ ಇದೆ. ಆದರೆ, ಈ ಎಲ್ಲಾ ನಿಯಮಗಳು ನಮಗೆ ಅಡ್ಡಿ ಬರುತ್ತಿದೆ. ಈ ನಿಯಮಗಳನ್ನು ಪರಿಹರಿಸಲಿಕ್ಕೆ ದಿನಾಂಕ : 3.8.04ರಿಂದ ನಡೆಯಲಿರುವ ವಿಚಾರಣೆಯಲ್ಲಿ ತೀರ್ಮಾನವೇನು ಬರುತ್ತದೆಂದು ನೋಡುತ್ತೇವೆ. ಎರಡನೆಯದಾಗಿ, ಸಂಪನ್ಮೂಲಗಳ ಇತಿ-ಮಿತಿಯಲ್ಲಿ ಹೇಗೆ ಮಾಡಬೇಕೆನ್ನುವುದನ್ನು ಮಾಡಿಕೊಂಡು ಕ್ರಮವನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಈಗ ಸದನವನ್ನು 3 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಈಗ ಗಮನಸೆಳೆಯುವ ಸೂಚನೆಗಳು.

(III) ವಿಷಯ : ಉಡುಪಿ ಜಿಲ್ಲೆಯ ಮಂದರ್ತಿ ದೇವಸ್ಥಾನದ ಯಕ್ಷಗಾನ ಮೇಳದಲ್ಲಿ ಬಿಲ್ಲವ ಸಮೂದಾಯಕ್ಕೂ ಅವಕಾಶ ನೀಡುವ ಬಗ್ಗೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯ ಮಂದರ್ತಿ ದೇವಸ್ಥಾನದ ಯಕ್ಷಗಾನ ಮೇಳದಲ್ಲಿ ಬಿಲ್ಲವ ಸಮೂದಾಯಕ್ಕೂ ಅವಕಾಶ ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

† **ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು)** : ಶ್ರೀ ಎಂ.ಪಿ. ಪ್ರಕಾಶ್, ಕಂದಾಯ ಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.